"ಪಿ.ಎಸ್.ಐ ಪರೀಕ್ಷೆಗಾಗಿ" (1) ಶಂಕರಾನಂದ ಶಿವಶಂಕರ.

## ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆ.

### ಪರಿಕಲ್ಪನೆ,

2012 ನವೆಂಬರ್‌ನಲ್ಲಿ ಕಾಂಬೋಡಿಯಾದಲ್ಲಿ ಆಸಿಯಾನ್ ಒಕ್ಕೂಟ ನಡೆಸಿದ ಸಮ್ಮೇಳನದ ಪ್ರತಿಫಲವೇ "ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆ" ಇದು 10 ಆಸಿಯಾನ್ ದೇಶಗಳು ಸೇರಿ 16 ರಾಷ್ಟ್ರಗಳನ್ನು ಒಳಗೊಂಡಿದೆ. ಅವುಗಳೆಂದರೆ ಭಾರತ, ಚೀನಾ, ಆಸ್ಟ್ರೇಲಿಯಾ, ಕೊರಿಯಾ, ಜಪಾನ್, ನ್ಯೂಜಿಲೆಂಡ್ ಇದರೊಂದಿಗೆ 10 ಆಸಿಯಾನ್ ಸದಸ್ಯ ದೇಶಗಳಾದ ಮಲೇಷ್ಯಾ, ಮಯನ್ಮಾರ್, ಫಿಲಿಪೈನ್ಸ್, ಸಿಂಗಾಪುರ್, ಥಾಯ್ಲೆಂಡ್, ವಿಯೆಟ್ನಾಂ, ಇಂಡೋನೇಷಿಯಾ, ಬ್ರೂನಿ, ಲಾವೋಸ್ ಮತ್ತು ಕಾಂಬೋಡಿಯಾ ಸೇರಿವೆ. ಈ ಎಲ್ಲಾ ದೇಶಗಳು ಸೇರಿದರೆ ಜಗತ್ತಿನ ಜನಸಂಖ್ಯೆಯ ಅರ್ಧದಷ್ಟಾಗುತ್ತದೆ. ಜಗತ್ತಿನ ಜಿ.ಡಿ.ಪಿ ಯ 30 ಪಾಲು ಒಳಗೊಂಡಿದೆ. ಜೊತೆಗೆ ಶೇ 25 ರಫ್ತು ಈ ದೇಶಗಳಿಂದ ನಡೆಯುತ್ತದೆ. ಈ ಕಾರಣಕ್ಕೆ ಈ ಸಹಭಾಗಿತ್ವವನ್ನು ಜಗತ್ತಿನ ಅತಿದೊಡ್ಡ ಆರ್ಥಿಕ ಒಪ್ಪಂದ ಆಗಿರುತ್ತದೆ.

### ಪ್ರಸ್ತುತ ಸುದ್ದಿಯಲ್ಲಿರುವುದೇಕೆ?

ಒಪ್ಪಂದದಲ್ಲಿ ಸಹಿ ಹಾಕಿದ ದೇಶಗಳಿಗೆ ಮುಕ್ತ ವ್ಯಾಪಾರಕ್ಕೆ ಅವಕಾಶ ದೊರಕಿಸಿ ಕೊಡುವುದೇ ಇದರ ಉದ್ದೇಶವಾಗಿದ್ದು, ಥೈಲ್ಯಾಂಡ್‌ನ ರಾಜಧಾನಿ ಬ್ಯಾಂಕಾಕ್‌ನಲ್ಲಿ

downloaded from: www.kpscvaani.com

Scanned by CamScanner

ನಡೆದ 16 ರಾಷ್ಟ್ರಗಳ ಸಮಾವೇಶದಲ್ಲಿ 15 ರಾಷ್ಟ್ರಗಳು ಆರ್ಥಿಕ ಸಹಕಾರಿಗಳಿಷ್ಟಕ್ಕೆ ಒಪ್ಪಿಗೆ ಸೂಚಿಸಿದರೆ, ಭಾರತ ಮಾತ್ರ ಹೊರಗುಳಿದಿದೆ. ಈ ಒಪ್ಪಂದಕ್ಕೆ ಸಹಿ ಹಾಕಿದ್ದರೆ ಭಾರತದ ತಯಾರಿಕಾ ವಲಯ, ರೈತರು ಮತ್ತು ಹಾಲು ಉತ್ಪಾದಕರಿಗೆ ಭಾರಿ ಹೊಡೆತ ಬೀಳುವ ಆತಂಕವಿತ್ತು, ಇದನ್ನು ವಿರೋಧಿಸಿ ರೈತರು & ಹಾಲು ಉತ್ಪಾದಕರು ಪ್ರತಿಭಟನೆ ನಡೆಸಿದ್ದು, ಹಲವು ಕಾರಣಗಳಿಂದ ಭಾರತ ಈ ಒಪ್ಪಂದಕ್ಕೆ ಸಹಿ ಹಾಕಿಲ್ಲ, ಕಾರಣ ಇದು ಪ್ರಶಂಸನೀಯವಾಗಿದೆ.

## ಭಾರತಕ್ಕೆ ಇದರಿಂದಾಗುವ ಅನಾನುಕೂಲಗಳೇನು?

1. ತಯಾರಿಕಾ ವಲಯಕ್ಕೆ ಕುತ್ತು :-

ಈ ಒಪ್ಪಂದಕ್ಕೆ ಭಾರತವು ಸಹಿ ಹಾಕಿದರೆ, ಉಳಿದ 15 ರಾಷ್ಟ್ರಗಳೂ ಭಾರತದ ಜೊತೆ ಸುಂಕರಹಿತ ವ್ಯಾಪಾರ ನಡೆಸಬಹುದು, ಈ ರಾಷ್ಟ್ರಗಳಿಂದ ಭಾರತಕ್ಕೆ ಆಮದಾಗುವ ಸರಕು ಮತ್ತು ಹೊರಗುತ್ತಿಗೆ ಸೇವೆಗಳಿಗೆ ಭಾರತವು ಯಾವುದೇ ಸುಂಕ ವಿಧಿಸುವ ಹಾಗಿಲ್ಲ. ಆಮದು ವಸ್ತುಗಳ ಬೆಲೆ ಭಾರಿ ಪ್ರಮಾಣದಲ್ಲಿ ಕಡಿಮೆ ಆಗುತ್ತದೆ. ಇದರಿಂದ ಸ್ಥಳೀಯ ಸರಕುಗಳಿಗೆ ಬೇಡಿಕೆ ಕುಸಿಯುತ್ತದೆ. ಭಾರತದ ತಯಾರಿಕಾ ವಲಯದ ಪ್ರಗತಿ ಕುಂಠಿತವಾಗುತ್ತದೆ.

downloaded from: www.kpscvaani.com

Scanned by CamScanner

## 2. ಡೇರಿ ಉದ್ಯಮಕ್ಕೆ ಹೊಡೆತ:

ಆಸಿಯಾನ್ ರಾಷ್ಟ್ರಗಳಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳು ಅತ್ಯಂತ ಕಡಿಮೆ ಬೆಲೆಯಲ್ಲಿ ಆಮದಾಗುವ ಸಾಧ್ಯತೆ ಇರುವುದರಿಂದ, ಭಾರತದಲ್ಲಿ ಲಭ್ಯವಿರುವ ದರಕ್ಕಿಂತ ಕಡಿಮೆ ದರದಲ್ಲಿ, ಆಮದಾಗುವ ಹಾಲು ಮತ್ತು ಹಾಲಿನ ಉತ್ಪನ್ನಗಳು ದೊರೆಯುವುದರಿಂದ, ದೇಶದ ಹೈನುಗಾರಿಕೆ ವಲಯಕ್ಕೆ ಭಾರಿ ಹೊಡೆತ ಬೀಳುತ್ತದೆ. ಇದರಿಂದ ರೈತರಿಗೆ ಅನಾನುಕೂಲವಾಗಲಿದೆ.

## 5. ಭಾರತದ ವ್ಯಾಪಾರ ಕೊರತೆ ಅಧಿಕವಾಗುತ್ತದೆ:

ಯಾವುದೇ ದೇಶವು ರಫ್ತು ಮಾಡುವ ಸರಕು/ಸೇವೆಗಳ ಮೊತ್ತಕ್ಕಿಂತ, ಆಮದು ಮಾಡಿಕೊಳ್ಳುವ ಸರಕು/ಸೇವೆಗಳ ಮೊತ್ತ ಅಧಿಕವಾಗಿದ್ದರೆ, ಅದನ್ನು ವ್ಯಾಪಾರ ಕೊರತೆ ಎಂದು ಕರೆಯುತ್ತೇವೆ. ಈಗಾಗಲೇ ಭಾರತ ಆರ್.ಸಿ.ಇ.ಪಿ ಒಪ್ಪಂದದಲ್ಲಿ ಬರಲಿರುವ ಎಲ್ಲಾ ದೇಶಗಳ ಜೊತೆ ವ್ಯಾಪಾರ ಕೊರತೆ ಹೊಂದಿದೆ. ಈ ಒಪ್ಪಂದಕ್ಕೆ ಸಹಿ ಹಾಕಿದರೆ ಅಧಿಕ ಪ್ರಮಾಣದ ಸರಕು ಆಮದಾಗುವುದರಿಂದ ರಫ್ತು ಮತ್ತು ಆಮದು ನಡುವಿನ ಅಂತರ ಮತ್ತಷ್ಟು ಹೆಚ್ಚಾಗಿ ವ್ಯಾಪಾರ ಕೊರತೆ ಹೆಚ್ಚುತ್ತದೆ.

downloaded from: www.kpscvaani.com

Scanned by CamScanner

ಟೆಲಿಕಾಂ, ಐಟಿಟಿ ಹಾಗೂ ಇತರ ಸಂಬಂಧಿತ ಉದ್ಯಮಗಳಿಗೆ ಲಾಭ ದೊರೆಯುತ್ತವೆ. ಮತ್ತು ವಿಶ್ವದ ಶೇ 45 ರಷ್ಟು ಜನಸಂಖ್ಯೆಯ ಮಾರುಕಟ್ಟೆ ಮೂಲಕ ತಲುಪಲು ಭಾರತಕ್ಕೆ ಸಹಾಯವಾಗುತ್ತದೆ.

## ಒಪ್ಪಂದಕ್ಕೆ ಸಹಿ ಹಾಕಿದ್ದರೆ, ಏನಾಗುತ್ತಿತ್ತು?

1. ಮುಕ್ತ ವ್ಯಾಪಾರಕ್ಕೆ ಅನುವು ಮಾಡಿಕೊಟ್ಟಿದ್ದರೆ ಈ ರಾಷ್ಟ್ರಗಳಿಂದ ಆಮದಾಗುವ ವಸ್ತುಗಳ ಮೇಲೆ ಇರುವ ಸುಂಕವನ್ನು ರದ್ದು ಮಾಡಬೇಕಾಗುತ್ತಿತ್ತು.
2. ಆಸಿಯಾನ್, ಜಪಾನ್ ಮತ್ತು ಆಸ್ಟ್ರೇಲಿಯಾದಿಂದ ಆಮದಾಗುವ ಶೇ 90 ರಷ್ಟು ವಸ್ತುಗಳ ಮೇಲೆ ಸುಂಕವನ್ನು ಭಾರತ ರದ್ದು ಮಾಡಬೇಕಾಗುತ್ತಿತ್ತು.
3. ಚೀನಾದಿಂದ ಆಮದಾಗುವ ಶೇ 74 ರಷ್ಟು ಸರಕುಗಳ ಮೇಲಿನ ಸುಂಕವನ್ನು ತೆಗೆದು ಹಾಕಬೇಕಿತ್ತು.

## ಆರ್.ಸಿ.ಇ.ಪಿ ಮತ್ತು ಗ್ಯಾಟ್ ಒಪ್ಪಂದ

ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆಗೆ ಇಂದೇ ಅಲ್ಲದಿದ್ದರೂ ಮತ್ತೊಂದು ದಿನ ಭಾರತ ಸಹಿ ಹಾಕಬೇಕಾಗಬಹುದು. 1995 ರಲ್ಲಿ ಗ್ಯಾಟ್‌ಗೆ ಸಹಿ ಹಾಕಿ ವಿಶ್ವ ವ್ಯಾಪಾರ ಸಂಸ್ಥೆಯನ್ನು ಸೇರಿದ ಬಾಗಿಲನ್ನು ಈಗ ಆರ್.ಸಿ.ಇ.ಪಿ

downloaded from: www.kpscvaani.com

Scanned by CamScanner

## 4. ಚೀನಾಗೆ ಲಾಭ, ಭಾರತಕ್ಕೆ ನಷ್ಟ :

ಚೀನಾದ ತಯಾರಿಕಾ ವಸ್ತುಗಳ ಮೇಲೆ ಅಮೇರಿಕಾ ಸುಂಕ ವಿಧಿಸಿರುವುದರಿಂದ, ಚೀನಾಕ್ಕೆ ಭಾರಿ ನಷ್ಟವಾಗುತ್ತದೆ. ಒಂದು ವೇಳೆ ಆರ್.ಸಿ.ಇ.ಪಿ ಒಪ್ಪಂದಕ್ಕೆ ಸಹಿ ಬಿದ್ದರೆ ಚೀನಾದಲ್ಲಿ ತಯಾರಾಗುವ ವಸ್ತುಗಳು, ಭಾರತದಲ್ಲಿ ತಯಾರಾಗುವ ವಸ್ತುಗಳಿಗಿಂತ ಅತಿ ಕಡಿಮೆ ಬೆಲೆಯಲ್ಲಿ ಸಿಗುವುದರಿಂದ ಚೀನಾಗೆ ಲಾಭವಾಗುತ್ತದೆ. ಚೀನಾ ಅಮೇರಿಕಾದಲ್ಲಿ ಕಳೆದುಕೊಂಡಿದ್ದನ್ನ, ಭಾರತದಲ್ಲಿ ಪಡೆಯಕೊಳ್ಳುತ್ತದೆ, ಭಾರತಕ್ಕೆ ನಷ್ಟ ಕಟ್ಟಿಟ್ಟ ಬುತ್ತಿ.

## ಒಪ್ಪಂದದಿಂದ ಅನುಕೂಲಗಳೇನು ?

ಕತ್ತಿಲಿನ ಎರಡೂ ಬದಿ ಇರುವಂತೆ, ಅನಾನುಕೂಲಗಳು ನೆರಳಿನಲ್ಲಿಯೂ, ಅನುಕೂಲಗಳ ಜೊತೆ ಇರುತ್ತದೆ. ಈ ಒಪ್ಪಂದದಿಂದ ಭಾರತೀಯರಿಗೆ ವಿದೇಶಿ ಬಳಕೆ ವಸ್ತುಗಳು ಅತಿ ಕಡಿಮೆ ದರದಲ್ಲಿ ಲಭ್ಯವಾಗುತ್ತವೆ. ಭಾರತ ಈ ಒಪ್ಪಂದಕ್ಕೆ ಸೇರಿದ್ದರೆ ಈಗಾಗಲೇ ಚೀನಾ ಮತ್ತು ಜಪಾನ್ ಜತೆಗಿರುವ ವ್ಯಾಪಾರ ವಲಯವನ್ನು ಮತ್ತಷ್ಟು ವಿಶಾಲವಾಗುತ್ತದೆ. ಭಾರತದ ಮಾಹಿತಿ-ತಂತ್ರಜ್ಞಾನ

downloaded from: www.kpscvaani.com

Scanned by CamScanner

ಗೆ ತೆರೆದರೆ ಭಾರತವು ಮಿಶ್ರ ಅರ್ಥವ್ಯವಸ್ಥೆಯಿಂದ, ಪೂರ್ಣ ಬಂಡವಾಳಶಾಹಿ ಆರ್ಥಿಕತೆಗೆ ರೂಪುಗೊಳ್ಳಬೇಕಾಗುತ್ತದೆ. ಗ್ಯಾಟ್ ಒಪ್ಪಂದದ ಪ್ರಕಾರ ಭಾರತ ಸೇವೆಗಳ ಕುರಿತಂತೆ ಹಾಕಿದ ಸಹಿಯಿಂದ ವಿದ್ಯುಸ್ಥಾನ, ಐಟಿ, ಆಡಳಿತ, ವಿಮೆ ಆರೋಗ್ಯ, ಸಂಪರ್ಕ, ಪ್ರವಾಸೋದ್ಯಮ ಮುಂತಾದ ಕ್ಷೇತ್ರಗಳು ಗಣನೀಯ ಪ್ರಗತಿಯಾದರೂ, ಗ್ರಾಮೀಣ ಭಾಗದ & ದೇಶದ ಅಸಂಖ್ಯ ಅಸಂಘಟಿತ ಕ್ಷೇತ್ರಗಳು ಸೇರಿದಂತೆ ಉಳಿದ ವಲಯಗಳಿಗೆ ಮಾರಕವಾಯಿತು. ಬೌದ್ಧಿಕ ಆಸ್ತಿ ಹಕ್ಕಿಗೆ ಸಂಬಂಧಿಸಿದ ಒಪ್ಪಂದಗಳ ಫಲವಾಗಿ ಔಷಧಿಗಳು, ಗೊಬ್ಬರ, ಕೀಟನಾಶಕಗಳು, ಬೀಜ ಇವುಗಳಿಗೆ ಬಹು-ರಾಷ್ಟ್ರೀಯ ಕಂಪನಿಗಳನ್ನೇ ಅವಲಂಬಿಸಿದ್ದರಿಂದ ಭಾರತದ ಅಸಂಘಟಿತ ವಲಯಗಳ ಸಮುದಾಯ ಜ್ಞಾನ, ಕೌಶಲ ಮತ್ತು ಆರ್ಥಿಕತೆಯನ್ನು ಈ ನೆಲದ ಸಾಮಾಜಿಕ & ಸಾಂಸ್ಕೃತಿಕ ಸಾರ್ವಭೌಮತ್ವವನ್ನು ಘಾಸಿ ಮಾಡಿವೆ.

## ಉಪಸಂಹಾರ

ಈಗ, ಆರ್.ಸಿ.ಇ.ಪಿ ವ್ಯಾಪ್ತಿಯ ವಲಯದ 15 ದೇಶಗಳ ಜೊತೆಗಿನ ನಮ್ಮ ವ್ಯವಹಾರ ಬಹುತೇಕ ಆಮದಿಗೆ ಸೀಮಿತವಾಗಿದೆ. ರಫ್ತಿನಲ್ಲಿ ನಾವು ಸಾಕಷ್ಟು ಹಿಂದಿದ್ದೇವೆ. ಉತ್ಪನ್ನಗಳು ಹಾಗೂ ಕೌಶಲದಲ್ಲಿ ಅಂತರಾಷ್ಟ್ರೀಯ

downloaded from: www.kpscvaani.com

Scanned by CamScanner

ಗುಣಮಟ್ಟವನ್ನು ಸಾಧಿಸಲು ಈವರೆಗೂ ನಮಗಾಗಿಲ್ಲ. ನಾಳೆ ಅದನ್ನು ಸಾಧಿಸುತ್ತೇವೆ ಎಂದರೂ ಸಾಧಿಸುವಷ್ಟರಲ್ಲಿ ವಿದೇಶದವರು ಜಾಗತಿಕ ಸ್ಪರ್ಧೆಯಲ್ಲಿ ನಮ್ಮನ್ನು ಹಿಂದಕ್ಕೆ ಹಾಕಿರುತ್ತಾರೆ. ಆರ್.ಸಿ.ಇ.ಪಿ ಒಪ್ಪಂದಕ್ಕೆ ಸಹಿ ಹಾಕುವ ಅಗತ್ಯವಾದರೂ ಏನಿದೆ? ನಮ್ಮಲ್ಲೇ ಅಪಾರವಾದ ಮಾರುಕಟ್ಟೆ ಇದೆ. ನಮ್ಮ ಕೌಶಲವನ್ನು ಹೆಚ್ಚಿಸಿಕೊಂಡು, ನಮ್ಮ ಉತ್ಪನ್ನಗಳನ್ನು ಶ್ರೇಷ್ಠವಾಗಿಸಿ ನಮ್ಮ ಗ್ರಾಹಕರಿಗೆ ತಲುಪಿಸುವ ಮೂಲಕ ಸುಸ್ಥಿರತೆಯನ್ನು ಸಾಧಿಸುವುದು-ಪ್ರಗತಿಪರ ಸಮಾಜವೊಂದರ ಶ್ರೇಷ್ಠ ಆವಿಷ್ಕಾರವಾಗಿದೆ.

ಶಿವಾನಂದ. ಬನಸೋಡೆ.
ಮುಖ್ಯ ಲೆಕ್ಕಾಧಿಕಾರಿ. ಮಹಾನಗರ
ಪಾಲಿಕೆ ಹುಬ್ಬಳ್ಳಿ-ಧಾರವಾಡ.

18.11.2019.

Note

ಈ ಮಾಹಿತಿಯನ್ನು ಹಲವಾರು ಪತ್ರಿಕೆ, ವೆಬ್‌ಸೈಟ್, ಅಂಕಣ-ಗಳನ್ನು ಕೂಡ ಅಧ್ಯಯಿಸಿಕೊಂಡು ಬರೆಯಲಾಗಿದೆ, ಪ್ರತ್ಯೇಕವಾಗಿ ಅವರೆಲ್ಲರ ಹೆಸರಿನ ಗ್ರಂಥಋಣ ನೀಡುವುದು ಅಸಾಧ್ಯ. ಅವರೆಲ್ಲರಿಗೆ ಋಣಿ.

downloaded from: www.kpscvaani.com

Scanned by CamScanner